# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ 16 , ಸಾಕ್ಷಿ 3**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಡಾ.ಸೋಮಶೇಖರ್ ಸಮಗಂಡಿ** |
| **ತಂದೆಯ ಹೆಸರು** | : | **ಲಿಂಗಪ್ಪ ಸಮಗಂಡಿ** |
| **ವಯಸ್ಸು** | : | **53 ವರ್ಷ** |
| **ಕೆಲಸ** | : | **ಪ್ರೊಫೆಸರ್ ಪ್ಲಾಸ್ಟಿಕ್ ಸರ್ಜರಿ ವಿಭಾಗ,**<br>**ಪ್ಲಾಸ್ಟಿಕ್ ಸರ್ಜರಿ ವಿಭಾಗ ವಿಮ್ಸ ಆಸ್ಪತ್ರೆ , ಬಳ್ಳಾರಿ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 10.7.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2006 ರಿಂದ ಈ ವರೆವಿಗೂ ವಿಮ್ಸ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ಸದರಿ ವಿಷಯದ ಪ್ರಾಧ್ಯಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

**2.** ಪ್ರಸ್ತುತ ಪ್ರಕರಣದ ಗಾಯಾಳು ಸಾಕ್ಷಿ ಮೂಕಮ್ಮ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸಾ ಕ್ರಮಕ್ಕೆಂದು ವಿಮ್ಸ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ದಾಖಲಾಗಿದ್ದು ಚಿಕಿತ್ಸೆ ಪಡೆದಿದ್ದರು. ಅವರು ತಮ್ಮ ಚಿಕಿತ್ಸೆಯ ಮುಂದುವರೆದ ಭಾಗವಾಗಿ ದಿಃ20.3.2025 ರಂದು ಬೆಳಿಗ್ಗೆ 11.00 ಗಂಟೆ ಸಮಯಕ್ಕೆ ಅವರ ಎಡ ಕೈ ಮುಷ್ಠಿ (Radius) ಮತ್ತು ಟೆಂಡಾನ್ , ನರಗಳು ಮುರಿತದ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಸರ್ಜರಿ ಶಸ್ತ್ರ ಚಿಕಿತ್ಸಾ ಕ್ರಮಕ್ಕೆ ಒಳಪಟ್ಟಿರುತ್ತಾರೆ .

**S.C.No. 34/2025**
**P.W.16**
**Date :10.7.2026**

**3.** ತದ ನಂತರ 8 ದಿನಗಳ ಕಾಲ ಅವರು ಶಸ್ತ್ರ ಚಿಕಿತ್ಸೆಯ ನಂತರ ಚಿಕಿತ್ಸಾ ಕ್ರಮದಿಂದ ದಿಃ28.3.2025 ರಂದು ಬಿಡುಗಡೆ ಆಗಿರುತ್ತಾರೆ. ಸದರಿ ಗಾಯಾಳುವಿನ ಪ್ಲಾಸ್ಟಿಕ್ ಸರ್ಜರಿ ಶಸ್ತ್ರ ಚಿಕಿತ್ಸೆ ಕುರಿತಂತೆ ಈಗ ನನಗೆ ತೋರಿಸಿದ ದಾಖಲಾತಿಗಳನ್ನು ನೀಡಿದ್ದೇನೆ. ಅವುಗಳ ಪೈಕಿ 18 ಪುಟಗಳ ಒಟ್ಟಾರೆ ಕಡತವನ್ನು **ನಿಪಿ.30** ಎಂದು ಈಗ ಗುರುತು ಮಾಡಲಾಯಿತು. ನಿಪಿ.30 ರ ಭಾಗವಾದ ಚಿಕಿತ್ಸಾ ಬಿಡುಗಡೆ ಪತ್ರಕ್ಕೆ ನಾನು ರುಜು ಮಾಡಿದ್ದು ನನ್ನ ರುಜುವನ್ನು ಈಗ **ನಿಪಿ.30 (ಎ)** ಎಂದು ಗುರುತು ಮಾಡಲಾಯಿತು.

## ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್.ಆರ್.ಜೆಃ ( ಎಲ್.ಎ.ಡಿಸಿ) ವಕೀಲರಿಂದ:

**4.** ನಾನು ಗಮನಿಸಿದ ಗಾಯದ wound debridement ಎಡ ಕೈನ ಮುಂಭಾಗದಲ್ಲಿ ಇತ್ತು. ಆಕೆಯ ನರಗಳು ಮುರಿತಕ್ಕೆ ಒಸಪಟ್ಟಿದ್ದವು. ಮುರಿತಕ್ಕೆ ಒಳಪಟ್ಟ ನರಗಳು ಆಕೆಯ ಬೆರಳುಗಳನ್ನು ನೇರ ಹಿಡಿಯಲು ಕಾರಣವಾಗಿರುತ್ತವೆ ಎಂದರೆ ಸರಿ . ನಾನು ಗಮನಿಸಿದ wound debridement ಗಾಯಾಳುವಿನ ರೇಡಿಯಸ್ ಭಾಗ ಮುರಿತಕ್ಕೆ ಒಳಪಟ್ಟಾಗ ಹಾಗೂ ಗಾಯಾಳುವಿಗೆ ಹರಿತ ಮಾರಣಾಂತಿಕ ವಸ್ತುವನ್ನು ಉಪಯೋಗಿಸಿ ಹಲ್ಲೆ ಮಾಡಿದಾಗಲು ಸಂಭವಿಸುವ ಸಾಧ್ಯತೆ ಇದೆ ಎಂದರೆ ಸರಿ .

5. ನಾನು ಗಮನಿಸಿದ wound debridement ಗಾಯಾಳು ತನ್ನ ಅಜಾಗರೂಕತೆಯಿಂದ ಈಗ ನನಗೆ ತೋರಿಸಿದ ಹಾಗೂ ಈಗಾಗಲೇ ನಿಡಿ 1 ಂಎಂದು ಗುರುತು ಮಾಡಿರುವ ಫೋಟೋ ದಲ್ಲಿ ಪ್ರತಿಬಿಂಬಿಸಿರುವ ಒರಟು ಮೇಲ್ಮೈ ನೆಲದ ಮೇಲೆ ಬಿದ್ದಾಗ ಸಂಭವಿಸುವ ಸಾಧ್ಯತೆ ಇದೆ ಎಂದರೆ ನಿಮ್ಮ ಸೂಚನೆ ತಪ್ಪು. ಗಾಯಾಳು ತನ್ನ

**S.C.No. 34/2025**
**P.W.16**
**Date :10.7.2026**

ಅಜಾಗರೂಕತೆಯಿಂದು ಹರಿತ ಮೇಲ್ಮೈವುಳ್ಳ ವಸ್ತುವಿನ ಮೇಲೆ ಬಿದ್ದು ತಾಗಿಸಿಕೊಂಡಾಗಲೂ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು. ನಾನು ಮಾಡಿದಂತಹ ಶಸ್ತ್ರ ಚಿಕಿತ್ಸೆ ಜೀವರಕ್ಷಿಸುವ ಶಸ್ತ್ರ ಚಿಕಿತ್ಸೆ ಆಗಿರದೇ ಕೇವಲ ಸರಿಪಡಿಸುವಿಕೆ ಕ್ರಮದ ಶಸ್ತ್ರ ಚಿಕಿತ್ಸೆ ಆಗಿತ್ತು ಎಂದರೆ ಸರಿಯಲ್ಲ.

**6**. ನಾನು ಕೈಗೊಂಡ ಶಸ್ತ್ರ ಚಿಕಿತ್ಸೆಯು ಕೇವಲ wound debridement ಭಾಗಕ್ಕೆ ಮಾತ್ರ ಮಂಪರು ಕ್ರಮವನ್ನು ಕೈಗೊಂಡು ಮಾಡಲಾಗಿದೆ . ಗಾಯಾಳು ಚಿಕಿತ್ಸಾ ಕ್ರಮದಿಂದ ಬಿಡುಗಡೆ ಆದ ಸಂದರ್ಭದಲ್ಲಿ ಆಕೆಯ ದೇಹಸ್ಥಿತಿ ಸಮರ್ಪಕವಾಗಿತ್ತು. ನಾನು ತನಿಖಾಧಿಕಾರಿಗೆ ಯಾವುದೆ ಪ್ರತ್ಯೇಕ ಹೇಳಿಕೆ ನೀಡಿಲ್ಲ.

**<u>ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**